**ಕವಿತೆ**




## ಅರಿನಾಗನಹಳ್ಳಿ ಅಮರ್‌ನಾಥ್

ಕಲೆ: ಗುರು ರಾಘವೇಂದ್ರ




# ಕೇಳುತ್ತಿದ್ದಾಳೆ ಭಾರತಿ

ಕೇಳುತ್ತಿದ್ದಾಳೆ ಭಾರತಿ ಅಂದು ಇಂದಿಗೆ ಹೋಲಿಸಿ
ನನ್ನ ನಿದ್ದೆಗೆಡಿಸುವಂತಹ ಉತ್ತರವಿಲ್ಲದ ಷಂಡನಾಗಿಸುತ
ನೂರಾರು ಪ್ರಶ್ನೆ

ಸುಟ್ಟ ಗಾಯಗಳ ಮೇಲೆ ಅಸಹಾಯಕತೆ ಲೇಪಿಸುತ
ಗೊತ್ತಿದೆಯೇ ಮಗನೆ ಆಂಗ್ರೇಜಿ ಜನ
ಬಡಿದು ಚಚ್ಚಿ ಗುಂಡಿಟ್ಟು ಸುಟ್ಟವರ ಚರಿತೆ?
ನೀನೇ ಈತನಕ ಬರದಿಲ್ಲವಲ್ಲೋ ಕಂದಾ
ನನ್ನ ಸಂತಾನದ ರಾಜಕೀಯ ಸ್ವಾರ್ಥ
ಕಿತ್ತ ಬದುಕುಗಳ ವಸದಿಟ್ಟ ಹೆಜ್ಜೆಗಳ ಚರಿತ್ರೆ
ಇರಲಿ ಕನಿಷ್ಠ ಪಟ್ಟಿಯನ್ನಾದರೂ..?

ಕುರುಡನೇ ನೀನು ಮಗನೆ
ಓಟು ಕೊಟ್ಟು ಬಣವೆ ತಂದುಕೊಂಡೆ
ನಿನ್ನ ದುಡಿಮೆಯ ಅದೆಷ್ಟೋ ಬೆವರಹನಿ ಬಂಡವಾಳಿಗರ
ತಿಜೋರಿಗಳಲ್ಲಿ
ಮುತ್ತು ಮಾಣಿಕ್ಯಗಳಾಗಿ ಬಿದ್ದಿವೆ ಕಾಲು ಮುರಿದು

ಕಾಣಲಿಲ್ಲೇಕೋ ನೀನು
ತುತ್ತು ತೋರಿ ಬಾಯಿಗಿಟ್ಟುಕೊಂಡವರ
ತನ್ನ ತನ್ನವರ ಖಜಾನೆಗಳ ತುಂಬಿದವರ ಬಿಡು ಈ ಎಲ್ಲಾ

ಧರೆಗಿಳಿದ ಶುದ್ಧ ನೀರಾದರೂ
ಉಳಿಸಿದಿಯೋ ನನ್ನ ಒಡಲಿಗೆ
ಕಳೆದುಕೊಂಡೆ ಕೆಚ್ಚು
ನೀನು ಗಂಡುಸಾದ ದಿನ ಕಂದಾ
ನಾನಾಗಿಯೆ ಮೆಚ್ಚಿ ಅಪ್ಪಿ
ಹಣೆಗೀಯ್ವೆ ಮುತ್ತು
ಈಗ ಸದ್ಯ ಅಭ್ಯಾಸ ಮಾಡಿಕೊಂಡ ನಿದ್ದೆ ಮಾಡು.

# ಎದೆಯಲ್ಲಿದ್ದರೆ ಪ್ರಶ್ನೆ

ಕೊಡುವುದಾದರೆ
ಸ್ವಾತಿ ಹನಿಯಾಗು

ಇಲ್ಲ
ಮುತ್ತು ಕೊಡುವ
ಚಿಪ್ಪಾಗು

ಎಷ್ಟು ದಿನ ಬದುಕುತ್ತಿ,

ಕೊಳುವುದರಲ್ಲೊ
ಕಳುವುದರಲ್ಲೊ
ಕೊಲುವುದರಲ್ಲೊ

ಎದೆಯಲ್ಲಿದ್ದರೆ ಪ್ರಶ್ನೆ
ಉತ್ತರವು ಅಲ್ಲೆ.